<u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ; ನ್ಯಾಯಾಲಯ, ಶ್ರೀರಂಗಪಟ್ಟಣ.</u>

ಸಾಕ್ಷಿಯನ್ನು ಮಧ್ಯಂತರ ಅರ್ಜಿಯ ಮೇಲೆ ಮಾಡಲಾದ ಆದೇಶದನ್ವಯ ಪುನಃ ಕರೆಯಿಸಿ ಪ್ರಮಾಣ ವಚನ ಮಾಡಲಾದ ದಿ : 03.11.2023
ಪಾಟಿ ಸವಾಲು : 5 ನೇ ಪ್ರತಿವಾದಿ ಪರ ಶ್ರೀ ಎನ್.ಎಂ.ಎಸ್ ವಕೀಲರಿಂದ

ಕನ್ನಡ ಭಾಷೆ ಓದಲು ಮತ್ತು ಬರೆಯಲು ಸ್ವಲ್ಪ ಬರುತ್ತದೆ. ನಾನು ಚಿಕ್ಕತಾಯಮ್ಮನವರಿಗೆ 2 ನೇ ಮಗನಾಗಿರುತ್ತೇನೆ. ನಾನು ನನ್ನ ಸಹೋದರ ಸಹೋದರಿಯರ ಪರವಾಗಿಯೂ ಸಹ ನನ್ನ ವಿಚಾರಣೆಯನ್ನು ನೀಡುತ್ತಿದ್ದೇನೆ. ನನ್ನ ತಾಯಿ ತನ್ನ ತಾಯಿಯ ಮನೆಯ ಆಸ್ತಿಯಲ್ಲಿ ಭಾಗಬರಬೇಕೆಂದು ಈ ದಾವೆಯಲ್ಲಿ ಸಲ್ಲಿಸಿದ್ದಾರೆ. ನನ್ನ ತಾಯಿಯ ತಂದೆಯ ಹೆಸರು ಮರಿಗೌಡ. ನನ್ನ ತಾಯಿಯ ತಂದೆ ಮರಿಗೌಡರಿಗೆ ಸೇರಿದ ಆಸ್ತಿಗಳ ಸಂಬಂಧ ಈ ದಾವೆಯನ್ನು ಸಲ್ಲಿಸಲಾಗಿದೆ. ದಾವಾ ಸ್ವತ್ತುಗಳು ನನ್ನ ತಾಯಿಯ ತಂದೆ ಮರಿಗೌಡರಿಗೆ ಸೇರಿತ್ತು ಎನ್ನುವ ಬಗ್ಗೆ ನಾನು ಆರ್.ಟಿ.ಸಿ ಗಳು , ಮ್ಯೂಟೇಶನ್ ಹಾಗೂ ವಂಶವೃಕ್ಷದ ದಾಖಲೆಗಳನ್ನು ಹಾಜರುಪಡಿಸಿದ್ದೇನೆ. ಸಾಕ್ಷಿ ಮುಂದುವರೆದು ಸದರಿ ದಾಖಲೆಗಳನ್ನು ನನ್ನ ತಾಯಿಯೇ ನೀಡಿದ್ದಾರೆ ಎಂದು ನುಡಿಯುತ್ತಾರೆ.

ಈ ದಾವೆಯಲ್ಲಿ ನಮ್ಮ ಪರವಾಗಿ ಹಾಜರುಪಡಿಸಿರುವ ದಾಖಲೆಗಳಲ್ಲಿ ವಂಶವೃಕ್ಷ ಇಲ್ಲವೆಂದರೆ ಸರಿ. ನನ್ನ ತಾಯಿಯ ತಂದೆ ಮರಿಗೌಡ ರವರ ತಂದೆಯ ಹೆಸರು ನನಗೆ ಗೊತ್ತಿಲ್ಲ. ನಾನು ಹಾಜರುಪಡಿಸಿರುವ ಆರ್.ಟಿ.ಸಿ ಗಳು 4 ನೇ ಪ್ರತಿವಾದಿ ಮರಿಗೌಡರ ತಂದೆ ಮರಿಗೌಡರಿಗೆ ಸೇರಿದಂತಹ ಸ್ವತ್ತುಗಳ ಆರ್.ಟಿ.ಸಿ ಗಳು ಎಂದರೆ ಸರಿ. ನನ್ನ ತಾಯಿಯ ತಂದೆ ಮರಿಗೌಡ ಸುಮಾರು 20 ವರ್ಷಗಳ ಹಿಂದೆ ಮೃತರಾಗಿದ್ದಾರೆ. ನನ್ನ ತಾಯಿಯ ತಂದೆ ಮರಿಗೌಡ ಬದುಕಿದ್ದ ಕಾಲದಲ್ಲಿ ಅವರ ಮಕ್ಕಳು ತಮ್ಮ ಕುಟುಂಬ ಸದಸ್ಯರ ಜೊತೆ ಪ್ರತ್ಯೇಕವಾಗಿ ವಾಸಿಸುತ್ತಿದ್ದರು ಎಂದರೆ ಸುಳ್ಳು. ಪ್ರಸುತ್ತ ದಾವಾ ಸ್ವತ್ತುಗಳ ಸ್ವಾಧೀನ ನನ್ನ ಮಾವ ಮರಿಗೌಡರ ಕುಟುಂಬ ಸದಸ್ಯರ ಸ್ವಾಧೀನದಲ್ಲಿರುತ್ತದೆ. ಹಾಲಿ ದಾವಾ ಸ್ವತ್ತುಗಳ ಸ್ವಾಧೀನ ಕೆ.ಐ.ಎ.ಡಿ.ಬಿ ರವರಲ್ಲಿದೆ ಎಂದರೆ ನನಗೆ ಗೊತ್ತಿಲ್ಲ.

ದಾವಾ ಸ್ವತ್ತುಗಳು ನನ್ನ ಮಾವ 4 ನೇ ಪ್ರತಿವಾದಿ ಮರಿಗೌಡ ರವರ ಸ್ವಯಾರ್ಜಿತ ಸ್ವತ್ತು ಎಂದರೆ ಸರಿ ಸಾಕ್ಷಿ ಮುಂದುವರೆದು ಅವುಗಳ ಜೊತೆ ಪಿತ್ರಾರ್ಜಿತ ಸ್ವತ್ತು ಸಹ ಸೇರಿದೆ ಎಂದು ನುಡಿಯುತ್ತಾರೆ. ನನ್ನ ಮಾವ 4 ನೇ ಪ್ರತಿವಾದಿ ಮರಿಗೌಡರಿಗೆ ಸೇರಿದ ಪಿತ್ರಾರ್ಜಿತ ಸ್ವತ್ತನ್ನು ಈ ದಾವೆಯಲ್ಲಿ ಸೇರಿಸಲು ತೊಂದರೆ ಇಲ್ಲ. 2 ನೇ ಐಟಂ ದಾವಾ

ಸ್ವತ್ತು ದಿಃ 22.11.1985 ರಲ್ಲಿ 4 ನೇ ಪ್ರತಿವಾದಿ ಮರಿಗೌಡ ರವರು ನೋಂದಾಯಿತ ಕ್ರಯಪತ್ರ ಮುಖೇನ ಸ್ವಯಾರ್ಜಿತವಾಗಿ ಖರೀದಿ ಮಾಡಿದ ಸ್ವತ್ತು ಎಂದರೆ ಸರಿ. ದಿಃ 30.09.1974 ರಲ್ಲಿ ದಾವಾ ಐಟಂ.3 ನೇ ಸ್ವತ್ತನ್ನು 4 ನೇ ಪ್ರತಿವಾದಿ ಖರೀದಿಗೆ ಪಡೆದ ಸ್ವಯಾರ್ಜಿತ ಸ್ವತ್ತು ಎಂದರೆ ನನಗೆ ಗೊತ್ತಿಲ್ಲ. ದಾವಾ ಐಟಂ.1 ನೇ ಸ್ವತ್ತು ಎಂ.ಆರ್.9/1992-93 ರಂತೆ ನನ್ನ ತಾತ ಮರಿಗೌಡ ಮೃತರಾದ ನಂತರ ಅವರ ಕುಟುಂಬ ಸದಸ್ಯರಲ್ಲಿ ಆದ ಕುಟುಂಬ ವಿಭಾಗದಂತೆ 4 ನೇ ಪ್ರತಿವಾದಿ ಮರಿಗೌಡರಿಗೆ ಬಂದಂತಹ ಸ್ವತ್ತು ಎಂದರೆ ಸರಿಯಲ್ಲ. ದಾವಾ ಐಟಂ.1 ರ ಸ್ವತ್ತಿನ ಒಟ್ಟು ವಿಸ್ತೀರ್ಣ 1 ಎಕರೆ 22 ಗುಂಟೆ ಎಂದರೆ ಸರಿಯಲ್ಲ. ಸದರಿ ಸ್ವತ್ತಿನ ಪೈಕಿ 30 ಗುಂಟೆ ವಿಸ್ತೀರ್ಣದ ಸ್ವತ್ತು 4 ನೇ ಪ್ರತಿವಾದಿಗೆ ವಿಭಾಗದಂತೆ ಬಂದಿದೆ ಎಂದರೆ ನನಗೆ ಗೊತ್ತಿಲ್ಲ. 4 ನೇ ಪ್ರತಿವಾದಿಗೆ ಬಂದ 30 ಗುಂಟೆ ಸ್ವತ್ತನ್ನು ಬಿಟುಟ ಮಿಕ್ಕುಳಿದ ಸ.ನಂ.43/2 ಎ ರಲ್ಲಿನ ಸ್ವತ್ತನ್ನು ಈ ದಾವೆಯಲ್ಲಿ ಸೇರಿಸಲು ತೊಂದರೆ ಇತ್ತಾ ಎನ್ನುವ ಪ್ರಶ್ನೆಗೆ ಸಾಕ್ಷಿಯು ದಾವಾ ಐಟಂ.1 ರಲ್ಲಿ 30 ಗುಂಟೆ ವಿಸ್ತೀರ್ಣದ ಸ್ವತ್ತು ಮಾತ್ರ ಇದೆ ಎಂದು ನುಡಿಯುತ್ತಾರೆ.

ನನ್ನ ತಾತ ಮರಿಗೌಡರಿಗೆ ಎಷ್ಟು ಜಮೀನು ಮತ್ತು ಮನೆಯ ಸ್ವತ್ತುಗಳು ಇರುತ್ತವೆ ಎನ್ನುವ ಸಂಬಂಧ ದಾಖಲಾತಿಗಳನ್ನು ಹಾಜರುಪಡಿಸಲು ನನಗೆ ತೊಂದರೆ ಇಲ್ಲ.

ನನ್ನ ತಾಯಿ ಮದುವೆಯಾದ ನಂತರ ವಾಜಮಂಗಲಕ್ಕೆ ಹೋಗಿದ್ದು ಅಲ್ಲಿಯೇ ಗಂಡನ ಮನೆಯಲ್ಲಿ ವಾಸಿಸುತ್ತಿದ್ದರು ಎಂದರೆ ಸರಿ. ಹಬ್ಬ ಹರಿದಿನಗಳಲ್ಲಿ ಮಾತ್ರ ತನ್ನ ತಂದೆಯ ಮನೆಯಾದ ಬೊಂತಗಳ್ಳಿಗೆ ಬರುತ್ತಿದ್ದರು ಎಂದರೆ ಸರಿ. ನನ್ನ ತಾಯಿಗೆ ತನ್ನ ತಂದೆ ಮರಿಗೌಡರ ಸ್ವತ್ತಿನಲ್ಲಿ ಮಾತ್ರ ಭಾಗಾಂಶ ಹಕ್ಕು ಇದ್ದು 4 ನೇ ಪ್ರತಿವಾದಿ ಮರಿಗೌಡರ ಸ್ವತ್ತಿನಲ್ಲಿ ಭಾಗಾಂಶದ ಹಕ್ಕು ಇಲ್ಲವೆಂದರೆ ಸರಿಯಲ್ಲ. 4 ನೇ ಪ್ರತಿವಾದಿ ಮೃತರಾಗಿ ಸುಮಾರು 7-8 ವರ್ಷಗಳಾಗಿವೆ. ದಾವಾ ಸಲ್ಲಿಸುವ ಪೂರ್ವ ದಾವಾ ಸ್ವತ್ತುಗಳ ಹಕ್ಕು ಮಾಲೀಕತ್ವ 4 ನೇ ಪ್ರತಿವಾದಿ ಮರಿಗೌಡರಿಗೆ ಮಾತ್ರ ಇತ್ತು ಎಂದರೆ ಸುಳ್ಳು. 4 ನೇ ಪ್ರತಿವಾದಿ ಮರಿಗೌಡರು ಮೃತರಾದ ನಂತರ ಅವರ ವಾರಸುದಾರರಿಗೆ ಮಾತ್ರ ದಾವಾ ಸ್ವತ್ತುಗಳ ಸಂಬಂಧ ಹಕ್ಕು ಸ್ಥಾಪನೆಯಾಗಿದೆ ಎಂದರೆ ಸುಳ್ಳು.

ಕೆ.ಐ.ಎ.ಡಿ.ಬಿ ರವರು ದಾವಾ ಸ್ವತ್ತುಗಳನ್ನು ಸ್ವಾಧೀನಕ್ಕೆ ಪಡೆದ ವಿಚಾರಕ್ಕೆ ಸಂಬಂಧಿಸಿದಂತೆ ನನ್ನ ತಾಯಿಗೆ ಯಾವುದೇ ನೋಟೀಸ್ ಕೆ.ಐ.ಎ.ಡಿ.ಬಿ ರವರಿಂದ ಬಂದಿಲ್ಲ.

(ಈ ಹಂತದಲ್ಲಿ ಮಾನ್ಯ 5 ನೇ ಪ್ರತಿವಾದಿ ಪರ ವಕೀಲರು ಸಾಕ್ಷಿಯ ಮುಂದುವರೆದ ಪಾಟಿ ಸವಾಲಿಗಾಗಿ ಸಮಯಾವಕಾಶ ಕೋರಿದ್ದು ನೀಡಲಾಗಿದೆ)

ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಸಾ.ಓ.ಹೇ.ಸ.ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ., ಶ್ರೀರಂಗಪಟ್ಟಣ.